ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು.

ಆ) ಸಂಸ್ಥೆಯು ರೋಗಗ್ರಸ್ಥವಾಗಲು ಕಾರಣಗಳು ಈ ಕೆಳಕಂಡಂತಿವೆ:

1. ಹಳೆಯ ಯಂತ್ರೋಪಕರಣಗಳು
2. ರೂಢಿಯಲ್ಲಿಲ್ಲದ ತಂತ್ರವಿಜ್ಞಾನ
3. ಮಿತಿಮೀರಿದ ನೌಕರರ ಸಂಖ್ಯೆ
4. ಹೆಚ್ಚಾದ ಕಚ್ಚಾ ಪದಾರ್ಥಗಳ ಬೆಲೆ ಹಾಗೂ ಮೇಲ್ವೆಚ್ಚ
5. ಮಾರುಕಟ್ಟೆಯಲ್ಲಿನ ತೀವ್ರ ಪೈಪೋಟಿ
6. ಕಾರ್ಯನಿರ್ವಹಣೆಯ ಹಣದ ತೀವ್ರ ಕೊರತೆ

ಇ) 21 ಎಕರೆ 09 ಗುಂಟೆ.

ಈ) ಈ ಪೈಕಿ 9 ಎಕರೆ ಜಮೀನನ್ನು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಕ್ಕೆ ನೀಡುವ ಪ್ರಸ್ತಾವನೆ ಇದೆ. ಉಳಿದ ಜಮೀನಿನ ಬಗ್ಗೆ ಅಂತಿಮ ನಿರ್ಧಾರ ಆಗಿರುವುದಿಲ್ಲ.

ಉ) ಪ್ರಸ್ತುತ ನೋಂದಣಿ ಇಲಾಖೆಯ ಮಾರ್ಗಸೂಚಿ ದರದ ಅನ್ವಯ ಸಂಸ್ಥೆಯ ಒಟ್ಟು ಜಮೀನಿನ ಬೆಲೆ ರೂ.346.71 ಕೋಟಿಗಳು.

ಡಾ॥ ನಂಜುಂಡಪ್ಪ ವರದಿ ಅನುಷ್ಠಾನ

679 (267) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾದೇಶಿಕ ಅಸಮತೋಲನ ನಿವಾರಿಸಲು ಹಾಗೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಸರ್ಕಾರ ನರಜುಂಡಪ್ಪ ವರದಿ ಅನುಷ್ಠಾನ ಸಮಿತಿಯನ್ನು ರಚಿಸಿದೆಯೇ;

ಆ) ಹಾಗಿದ್ದಲ್ಲಿ, ಸಮಿತಿಯನ್ನು ಯಾವಾಗ ರಚಿಸಲಾಯಿತು;

ಇ) ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ ನೀಡುವುದು;

ಈ) ಸಮಿತಿಯು ವರದಿ ಅನುಷ್ಠಾನಕ್ಕೆ ಖರ್ಚು ಮಾಡಿದ ಹಣವೆಷ್ಟು?

ಉ) ಸಮಿತಿಯು ಇಲ್ಲಿಯವರೆಗೆ ಕೈಗೊಂಡ ಕಾರ್ಯಕ್ರಮಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು) :

ಅ) ಪ್ರಾದೇಶಿಕ ಅಸಮತೋಲನ ನಿವಾರಿಸಲು ಹಾಗೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಸರ್ಕಾರವು ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿಯನ್ನು ರಚಿಸಿದೆ.

ಆ) 2008 ಅಕ್ಟೋಬರ್‌ನಲ್ಲಿ ಸಮಿತಿಯನ್ನು ರಚಿಸಲಾಯಿತು.

ಇ) ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರ ಸಮಿತಿಯನ್ನು ರಚಿಸಲಾಗಿದೆ.

1. ಶ್ರೀ ಎ.ಆರ್. ಕೃಷ್ಣಮೂರ್ತಿ, ಮಾಜಿ ವಿಧಾನ ಸಭಾಸದಸ್ಯರು.
2. ಡಾ॥ ಆರ್.ಬಿ. ಶಿರಿಯಣ್ಣವರ ಮಾಜಿ ವಿಧಾನ ಸಭಾಸದಸ್ಯರು.
3. ಡಾ॥ ಅಬ್ದುಲ್ ಅಜೀಜ್, ನಿವೃತ್ತ ಪ್ರಾಧ್ಯಾಪಕರು, ISEC ಬೆಂಗಳೂರು.
4. ಡಾ॥ (ಶ್ರೀಮತಿ) ಛಾಯಾ ದೇಗಾಂವ್‌ಕರ್, ಅರ್ಥಶಾಸ್ತ್ರ ಪ್ರಾಧ್ಯಾಪಕರು, ಗುಲ್ಬರ್ಗ ವಿಶ್ವವಿದ್ಯಾಲಯ
5. ಡಾ॥ ಬಿ. ಶೇಷಾದ್ರಿ ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕರು
6. ಶ್ರೀ ವಿ. ಶಾಂತಪ್ಪ, ನಿವೃತ್ತ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
7. ಡಾ॥ ಕೆ.ವಿ.ರಾಜು, ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು.

ಈ)

(ಕೋಟಿ ರೂ.ಗಳಲ್ಲಿ)

ವರ್ಷ	ಆಯವ್ಯಯದಲ್ಲಿ ಒದಗಿಸಿರುವ ಹಣ	ಬಿಡುಗಡೆ ಮಾಡಲಾದ ಹಣ	ವೆಚ್ಚ
2007–08	1571.50	951.44	945.99
2008–09	2547.33	1710.42	1739.41 *
2009–10	2578.83	1396.08 **	1248.23 **

* ಬಿಡುಗಡೆ ಮಾಡಿದ ಹಣಕ್ಕಿಂತ ಹೆಚ್ಚು ಖರ್ಚಾಗಿರುವುದಕ್ಕೆ ಕಾರಣ ಇಂಧನ ಇಲಾಖೆಯಡಿಯಲ್ಲಿ ವಿದ್ಯುಚ್ಛಕ್ತಿ ವಿತರಣಾ ಕಂಪನಿಗಳು ಸರ್ಕಾರ ಬಿಡುಗಡೆ ಮಾಡಿದ ಹಣವಲ್ಲದೆ ತಮ್ಮ ಸ್ವಂತ ಸಂಪನ್ಮೂಲದಿಂದ ಹಿಂದುಳಿದ ತಾಲ್ಲೂಕುಗಳಿಗೆ ವೆಚ್ಚ ಮಾಡಿರುತ್ತವೆ.

** ಇಲ್ಲಿಯವರೆಗೆ

ಉ) ಸಮಿತಿಯು ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯ ಮಟ್ಟದಲ್ಲಿ ಹಲವಾರು ಬಾರಿ ಹಾಗೂ ಜಿಲ್ಲಾ ಮಟ್ಟದಲ್ಲಿ ವಿವಿಧ ಜಿಲ್ಲೆಗಳಲ್ಲಿ ಪರಿಶೀಲನಾ ಸಭೆಗಳನ್ನು ನಡೆಸಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿರುತ್ತದೆ.

ಶುಲ್ಕ ಕಟ್ಟಿದ ಫಲಾನುಭವಿಗಳಿಗೆ ಅನ್ಯಾಯವಾಗುತ್ತಿರುವುದು

681 (843) ಶ್ರೀ ರಮಾನಾಥ್ ರೈ.ಬಿ. (ಬಂಟ್ವಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಮೀನಿನ ಗಡಿ ಗುರುತು ಮಾಡಿಸಲು ಫಲಾನುಭವಿಗಳು ದುಬಾರಿ ಶುಲ್ಕ ಕಟ್ಟಿ 3 ತಿಂಗಳು ಕಳೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಭೂಮಾಪಕರನ್ನು ನೇಮಕಾತಿ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿರುವುದೇ?

ಈ) ಇಲ್ಲದಿದ್ದಲ್ಲಿ, ಈ ವಿಳಂಬ ಪ್ರಗತಿಗೆ ಕಾರಣಗಳೇನು?